Regd No M 1299 SATYAVADI

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 98] ಸೋಮವಾರ 16—2—48 [ಬಿಡಿ ಪ್ರತಿ 3 ಪೈ

ಸಾಕೆಸ್ತಾನದ ಧಾಂಧಲೆ

1 ಮೈನಾರಿಟಿ ಪಂಗಡಗಳವರ ನಿತ್ಯಜೀವಿತವು ದುರ್ಭರವಾಗುತ್ತಿರುವು ದೆಂದು ವರ್ತಮಾನ.

2 ಸಿಂಧು ಅಬ್ಜರ್ವರ್, ಹಿಂದೂ ಹಿಂದೂಸ್ತಾನ್ ಎಂಬ ಮೂರು ಕರಾಚಿ ದಿನಪತ್ರಿಕೆಗಳ ಗೃಹಗಳನ್ನು ಸಂಕಾರವು ಸ್ವಾಧೀನ ಪಡಿಸಿಕೊಂಡಿತು.

3 ಮೈನಾರಿಟಿಗಳಿಗೆ ಸೇರಿದ ಸ್ವರಾಜ್, ನಯಾಸಂಸಾರ್ ಮೊದಲಾದ ದಿನಪತ್ರಿಕೆಗಳು ಬಲವಂತವಾಗಿ ನಿಲ್ಲಿಸಲ್ಪಟ್ಟವು.

4 ಕರಾಚಿ ಡೇಲಿ ಗೆಜಿಟ್ಟಿನ ಸಂಪಾದಕರಾದ ಶ್ರೀ ಶರ್ಮರವರನ್ನು ನಿರಾಶ್ರಿತರಾಗಿ ಬಂದ ಮುಸ್ಲಿಮರು ಕೆಲವರು ಕೆಲವರು ಬಂಡವಾಳಗಾರರ ಸಹಾಯದೊಂದಿಗೆ ಕತ್ತಿಯ ತಿನಿತನ್ನು ಪ್ರಾರಂಭಿಸಿದ್ದರಿಂದ ಈ ಪರಿಸ್ಥಿತಿಯು ಏರ್ಪಟ್ಟಿರುವುದೆಂದು ಹೇಳಿರುವರು.

5 ಪಾಕಿಸ್ತಾನದಲ್ಲಿ ಪರಿಪಾಲನೆಯು ಸಕ್ರಮವಾಗಿ ನಡೆಯುತ್ತಿಲ್ಲ. ಗೂಂಡಾಗಳು ಇನ್ನೂ ಸ್ವೇಚ್ಛೆಯೊಡನೆ ಸುಳಿದಾಡುತ್ತಿರುತ್ತಾರೆ. ಪಾಕಿಸ್ತಾನ ಸರಕಾರದ ವಿದೇಶಾಂಗ ಮಂತ್ರಿಯು ಕ್ಯಾಸಿಯುರ್‌ನಿಂದಲೇ ಐದು ಸಾವಿರ ರೂಪಾಯಿಗಳ ನೋಟುಗಳು ಅಪಹರಿಸಲ್ಪಟ್ಟಿದೆಯೆಂದು ಕರಾಚೀ ಸಮಾಚಾರ.

ಗಾಂಧೀ ಕವಿತೆ

[ರಾಜಾ ಎಸ್. ಗುರುರಾಜಾಚಾರ್ಯ]

ಶ್ರೀಮಾನ್ ಗಾಂಧೀ ಸುಧೀಮಾನ್ ನಿಖಿಲ
ಜನಹಿತಃ ಅಹಿಂಸೆಯಾಂಭಾರತಸ್ಯ
ಸಂಪಾದ್ಯಾತುಸ್ವತಂತ್ರಜಗದಖಿಲಶ-ಭಾ!
ಕಾಂಕ್ಷಯಾ ದೇವದೇವಂ ॥
ನಿತ್ಯಂಸಂಪ್ರಾರ್ಥ್ಯಮಾನಃ ತ್ರಿಮುನಿಯ-
ತಿನುತಃ ಸ್ವರ್ಗದೋಯಂವಿಭಾತಿ ॥
ಹಿಂದೂಮುಸ್ಲಿಂಹೃತೈಷೀಭ್ರಾತಜನ
ಮಹಾಭಾಗ್ಯಭಾನುರ್ವಿಲೀನಃ ॥

ಅರ್ಥ— ಎಲ್ಲ ಜನರಿಗೂ ಪ್ರಿಯನಾಶ್ಚಿ ಹಿಂದೂಮುಸ್ಲಿಂ ಹಿತೈಷಿಯಾದ ಸಮಸ್ತ ಪ್ರಪಂಚದ ಹಿತಕ್ಕಾಗಿ ನಿತ್ಯವೂ ಪ್ರಾರ್ಥಿಸುತ್ತಿದ್ದ [illegible] ಭಾವ,

ಹರಿಜನ ದೇವಾಲಯ ಪ್ರವೇಶಕ್ಕೆ ಅಡಚಣೆ ಮಾಡುವವರಿಗೆ ಜುಲಾನೆ ಮತ್ತು ಸಜಾ

ವಿಶೇಷ ಗೆಜಿಟ್ಟಿನಲ್ಲಿ ಮೈಸೂರು ಪ್ರಭುತ್ವ ಪ್ರಕಟಣೆ

ದೇವಾಲಯ ಪ್ರವೇಶ ಕಾನೂನು

ಬೆಂಗಳೂರು ಫೆ 16— ಹರಿಜನರಿಗೆ ದೇವಾಲಯ ಪ್ರವೇಶ ಸೌಲಭ್ಯವೀಯುವ ಬಗ್ಗೆ ಮೈಸೂರು ಸಂಸ್ಥಾನ ದೇವಾಲಯ ಪ್ರವೇಶ ಅಧಿಕಾರ ಕಾನೂನನ್ನು ಕುರಿತು ಮೈಸೂರು ಪ್ರಭುತ್ವ ವಿಶೇಷ ಗೆಜಿಟ್ಟಿನಲ್ಲಿ ವಿಸ್ತಾರ ವಿವರ ಕೊಟ್ಟಿದೆ ಆ ಶಾಸನ ರೀತ್ಯಾ ಹರಿಜನರು ದೇವಾಲಯ ಪ್ರವೇಶ ಮಾಡುವ ಬಗ್ಗೆ ಅಡ್ಡಿ ತಂದರೆ, ತಡೆಯೊಡ್ಡಿದರೆ, ಉದ್ರವ ಕೂಟ್ಟರೆ ಅಪರಾಧವೆಂದೂ ಪರಿಗಣಿಸಲಾಗುವುದು. ಆ ರೀತಿಯ ಪ್ರಥಮ ಅಪರಾಧಕ್ಕೆ ರೂ 100 ರವರೆಗೆ ಜುಲ್ಮಾನೆಯೂ, ಎರಡನೇ ಅಥವಾ ಕ್ರಮೇಣ ಅಪರಾಧಕ್ಕೆ ಆರು ತಿಂಗಳವರೆಗೆ ಸಜಾ ರೂ. 500 ರವರೆಗೆ ಜುಲ್ಮಾನೆಯೂ ಅಥವಾ ಎರಡೂ ವಿಧಿಸಲ್ಪಡಬಹುದು.

"ಪ್ರಭಾ" ಪ್ರಾರಂಭೋತ್ಸವ

ಶ್ರೀ ಜಿ ಆರ್. ರಾಮಯ್ಯ ಮತ್ತು ರಾಮಪ್ಪ ರಟ್ಟೆಹಳ್ಳಿಯವರ 'ಪ್ರಭಾ' ಚಿತ್ರ ಮಂದಿರದ ಪ್ರಾರಂಭೋತ್ಸವವು ನಿನ್ನೆ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಸಂಸ್ಥಾನದ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನಾನಂತರ ಶ್ರೀ ದಾಸಪ್ಪನವರಿಗೆ ಶ್ರೀ ರಾಮಪ್ಪನವರು ಬೆಸವತ್ತಳೆಯನ್ನು ತೊಡಿಸಿ ಆರ್ಪಿಸಿದರು. ಅಧ್ಯಕ್ಷರು ಭಾಷಣ ಮಾಡುತ್ತಾ ಗಾಂಧೀಜಿಯವರ ಗುಣಗಾನ ಮಾಡಿದರು. ಅವರಿಗೆ ಒಳ್ಳೆಯ ಚಿತ್ರಗಳ ಮೇಲೆ ಅಭಿಮಾನವಿತ್ತೆಂದರು. ಚಿತ್ರಮಂದಿರಗಳು ಹೆಚ್ಚುತ್ತಿರುವುದರಿಂದ ಈ ಬಗೆಗೆ ಏನಾದರೂ ಕಾನೂನು ಮಾಡಬೇಕಾದೀತೆಂದರು. ಪ್ರಭಾ ಮಾಲೀಕರ ಧೈರ್ಯ ಸಾಹಸವನ್ನು ಮೆಚ್ಚಿ ಉದ್ಯಮವು ಯಶಸ್ವಿಯಾಗಿ ಬಾಳಲೆಂದು ಕೋರಿದರು. ಶ್ರೀ ಜಿ. ಆರ್. ರಾಮಯ್ಯನವರು ಅಧ್ಯಕ್ಷರಿಗೂ, ಮತ್ತು ಈ ಸಂದರ್ಭದಲ್ಲಿ ತನಗೆ ಸಂದಾದ ಸಕಲರಿಗೂ ಹೃತ್ಪೂರ್ವಕವಾಗಿ ವಂದಿಸಿದರು ಮತ್ತು ಗಾಂಧೀಜೀ ಸ್ಮಾರಕ ನಿಧಿಗೆ ರೂ. 1091 ಉಡುಗೊರೆ ಕಾಣಿಕೆಯಿತ್ತರು. ರತ್ನಮಾಲಾ ಚಿತ್ರವು ಸ್ವಲ್ಪ ಪ್ರದರ್ಶಿಸಲ್ಪಟ್ಟು, 'ಥ್ಯಾಂಕ್' ಯು, ನವ ಸ್ತೋತ್ರದಿಂದ ಸಮಾರಂಭವು ಪರಿಸಮಾಪ್ತವಾಯಿತು. 'ಪ್ರಭಾ' ಬಹುಕಾಲ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ.

ಹೆಂಡತಿಯನ್ನು ಕೊಡಿಹಾಕುವ ಅರಸು!

ಸ್ತ್ರೀ ಪುರುಷರಿಗೆ ಸಮಾನ ಸಂಪತ್ತಿ, ಸಾಮಾಜಿಕ ರಾಜಕೀಯಾದಿ ಸಮಾನ ಹಕ್ಕುಗಳಿರಬೇಕೆಂಬ ಧ್ಯೇಯವನ್ನಿಟ್ಟು ಕೊಂಡಿರುವ ಸಂಸ್ಥೆಯು ಲಂಡನ್ನಿನಲ್ಲಿದೆ ಅದರ ಮುಖ್ಯಸ್ಥಳಾದ ಡೇಂ ವೈಲೆಟ್ ಮ್ಯೋಥ್ಯೂಸ್ ಇವರು ಬ್ರಿಟಿಷ್ ಕೆಮರೂರ್ (ಪ॥ ಆಫ್ರಿಕಾ) ದ ಕಾಡು ಜಾತಿಯು ಜನಾಂಗವಾದ ಬೆಕಂಡ 80 ವರ್ಷದ ಅರಸನ ವಿರುದ್ಧ ರಾಷ್ಟ್ರ ಹಕ್ಕಿ ದೂರು ಮಾಡಿಕೊಂಡಿದ್ದಾರೆ ಈ ಕಾಡು ಅರಸನು ತನ್ನ ಜನ ಕಳುಹಿಸಿ, ತನ್ನ ರಾಜ್ಯದಲ್ಲಿರುವ ಣ ಹುಡುಗಿಯರನ್ನು ಹಿಡಿದ ತರಿ ನು. ಅವರನ್ನು ನಗ್ನ ಸ್ಥಿತಿಯಲ್ಲಿಸುವರು ರಾಜನ ಮನಸ್ಸಿಗೆ ಹಿ ವೆರನ್ನೆಲ್ಲ ನೆಲಕ್ಕೆ ಉರುಳಿಸ ವೆರು ಗ ಅರಸನು ಅವರ ಮೈಮೇಲೆ ತನ್ನ ಲನ್ನಿಡುವನು ಇಷ್ಟಕ್ಕೆ ಅವರ ಮದುವೆಯಾಯಿತು ಅವರಲ್ಲಿ ಇವರನ್ನು ತನ್ನ ರಾಣಿವಾಸಕ್ಕೆ ಸಾಗಿಸುವನು ರಾಜನ ರಾಣಿವಾಸದಲ್ಲಿ ಈಗಾಗಲೆ ಮೂರುಸೂರು ಜನ ಹೆಂಡರಿದ್ದಾರೆ

ಇವನೊಬ್ಬನೇ ಅಲ್ಲ ಪಶ್ಚಿಮ ಫ್ರಿಕೆಯ ಕಾಡು ಜನರಲ್ಲಿ ಬಹುಸಂಖ್ಯಾತ ಪದ್ಧತಿಯು ರೂಢಿಯಲ್ಲಿದೆ. ಸಾಮಾನ್ಯವಾಗಿ ಪ್ರತಿಯೊಬ್ಬನಿಗೂ ನಾಲ್ವರು ಹೆಂಡರು ಇರುವರು ಒಬ್ಬನಿಗಂತೂ 99 ಮಂದಿ ಹೆಂಡರಿದ್ದಾರೆ [ಲೊ]

ಗಾಂಧೀಜಿ ಕೌತುಕ

ನಿರಾಜ್ ಫೆ 11 — ಗಾಂಧೀಜೀ ಕೊಲೆ ಕಾಲದಲ್ಲಿ ನಡೆದ ಹಿಂಸಾಕಾಂಡದಿಂದ ಕುಲಕರ್ಣಿ ಎಂಬ ವಿದ್ಯಾರ್ಥಿ ಗೃಹಕ್ಕೆ ಅಗ್ನಿಸ್ಪರ್ಶವಾಯಿತು ಮನೆ ಎಲ್ಲಾ ಪದಾರ್ಥಗಳೂ ಸುಟ್ಟುಹೋದವು ; ಆದರೆ ಅಲ್ಲಿದ್ದ ಸುಟ್ಟುಹೋದ ಭಾರತ ಚರಿತ್ರೆಯ 495 ಮತ್ತು 495 ಮಧ್ಯೆ ಇದ್ದ ಗಾಂಧೀಜಿ ಚಿತ್ರಕ್ಕೆ ಏನು ಬಾಧಕವಾಗಿಲ್ಲ ! ಎಂಥಾ ಕೌತುಕ !

ಫೈಲುಗಳೇ ಛಟ್ ! !

ಮಹಾತ್ಮಾ ಗಾಂಧಿಯವರ ಕೊಲೆ ಒಳಸಂಚಿನ ಬಗ್ಗೆ ತನಿಖೆ ನಡೆಯುತ್ತಿರುವ ಈ ಸಂದಿಗ್ಧ ಸಮಯದಲ್ಲಿ ಪೂನಾ ಪೋಲೀಸು ಗುಪ್ತ ಶಾಖೆಯಲ್ಲಿದ್ದ ಫೈಲುಗಳೇ ಮಾಯವಾಗಿವೆಯೆಂಬ ಆಘಾತ ಸಂಗತಿ ಹೊಂಬಿದ್ದಿದೆ.

ಸೂಚನೆ— ರಥಸಪ್ತಮಿ ಹಬ್ಬದ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟವಾಗುವುದಿಲ್ಲ

ಹೈದರಾಬಾದು!

ನಿಜಾಂ ಪ್ರಜಾ ಸಮರವು ನಡೆಯುತ್ತಿರುವ ಮಾರ್ಗವನ್ನು ನೋಡಿದಲ್ಲಿ ಆಸಫ್ ಜಾಹಿ ವಂಶವು ಶೀಘ್ರದಲ್ಲೇ ಕೊನೆಗಾಣುವ ಲಕ್ಷಣಗಳು ಕಾಣಬರುತ್ತಿವೆ. ತಾಜಾ ಸಮಾಚಾರವನ್ನು ಹಿಡಿದು ಶ್ರೀ ರಾಮಾನಂದರವರು ಹೊರಗೆ ಇದ್ದ ಕಾಲಕ್ಕಿಂತ ಅಶಸ್ತು ಆಗಿರುವಾಗಲೇ ಚಳವಳಿಯು ಮುತ್ಸದ್ದು ವೇಗದೊಡನೆ ನಡೆಯುತ್ತಿದೆ ಹೈದರಾಬಾದು ಸಂಸ್ಥಾನದ 16 ಜಿಲ್ಲೆಗಳಲ್ಲಿನ ಕತ್ತು ಜಿಲ್ಲೆಗಳಲ್ಲಿ ಈಗ ನಿಜಾಂ ಸರಕಾರದ ರೂಪುರೇಷೆಗಳು ಕಾಣಿಸುವುದಿಲ್ಲ.

ಮಿಕ್ಕ 6 ಜಿಲ್ಲೆಗಳಲ್ಲಿ ಕೊನೆಗಾಣುತ್ತಿರುವ ಸರ್ಕಾರಿ ಯಂತ್ರವನ್ನು ನಿಲ್ಲಿಸಿಕೊಳ್ಳುವುದಕ್ಕಾಗಿಯೇ ನಿಜಾಂರ ಸಬ್ಬಂದಿಯೂ ಇತ್ತೀಚಿನ ದು ಮತೋನ್ಮಾದರದ ವಿಶ್ವಪ್ರಯತ್ನವನ್ನು ಮಾಡುತ್ತಿರುವರು.

ಈ ಪರಿಸ್ಥಿತಿಗಳಲ್ಲಿ ನಿಜಾಂರು ಇಂದು ಅಲ್ಲದಿದ್ದರೆ ನಾಳೆಯಾದರೂ ಬಗ್ಗಿದಲ್ಲಿ ಯಾರೂ ಆಶ್ಚರ್ಯ ಪಡಬೇಕಾಗಿರುವುದಿಲ್ಲ.

ಸಂಸ್ಥಾನದಲ್ಲೆಲ್ಲಾ ಪೋಲೀಸರ ಅತ್ಯಾಚಾರಗಳೂ, ಪ್ರಜೆಗಳ ಪ್ರತಿಭಟನೆಯೂ ನಡೆಯುತ್ತಲೇ ಇದೆ. (ತ್ರಿ)

ಇಂಡಿಯಾದಲ್ಲಿ 147 ಮಿಲಿಯ ಕಾರ್ಮಿಕರಿಯವರು ಇವರಲ್ಲಿ 22 ಮಿಲಿಯ ಜನ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಅ ಮೋ ಘ ಪ್ರಾ ರಂ ಭ

ಅತ್ಯಾಧುನಿಕ ಯಂತ್ರೋಪಕರಣಗಳಿಂದಲೂ ಸುಖಾಸನಗಳಿಂದಲೂ ಸಜ್ಜುಗೊಳಿಸಿರುವ

ರಾಜಧಾನಿಯ ಆಧುನಿಕ ಚಲನ ಚಿತ್ರ ಮಂದಿರ

ಪ್ರ ಭಾ ಪಿಕ್ಚರ್ ಹೌಸ್

15—2—48 ರಿಂದ .... ದಿನವಹಿ 3 ಆಟಗಳು

ಭರಣಿಯವರ ರ ತ್ನ ಮಾ ಲ (ತೆಲಗು)

ತಾರಾಗಣ : * ಭಾನುಮತಿ * ಸಿ. ಎಸ್. ಆರ್ * ಹೇಮಲತಾ * ಡಾ || ಸುಬ್ಬರಾವ್

ಮೈಸೂರು ಸಂಸ್ಥಾನದ ಕೈಗಾರಿಕಾ ಮತ್ತು ಆರ್ಥಿಕ ಸಚಿವರಾದ ಶ್ರೀಯುತ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ, ನಿನ್ನೇ ದಿವಸ ಬೆಳಿಗ್ಗೆ ಪ್ರಾರಂಭೋತ್ಸವವು ನೆರವೇರಿಸಲ್ಪಟ್ಟಿತು.

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈ ಸೂ ರು

ಮ ರ ದ ಸಾ ಮಾ ನು ಗ ಳು

ಸಹಜವಾದ ಅಡ್ಜಸ್ಟ್‌ಕಟ್ಟು, ನಾಜೂಕಾದ ಮೈಕಟ್ಟು

ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು

ಉಪಯೋಗಿಸುವವರ ಅನುಕೂಲಾದಿಗಳನ್ನು ವಿಮರ್ಶಿಸಲಿ

ಅವರವರ ಇಷ್ಟಾನುಗುಣವಾಗಿ, ಕುಶಲಗಾರರಾದ ಕೆಲಸಗಾರರಿಂದ

ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್

ಮೈ ಸೂ ರು

|| ವಂ ದೇ ಮಾ ತ ರಂ ||

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟಿದ್ದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ನಿನಸ್, ಮೈಸೂರು

SHAKTI SUDHA

A Superb TONIC

Woodlands

From 13–2–48

Federal Operator 99

A must-be-seen Picture

holds you spell bound

from start to finish

Daily 3 Shows

Save the Cow

At Opera

ಯಶಸ್ವಿ 3 ನೇ ವಾರ

ಕನ್ನಾಂಬಾ, ಚಿನ್ನಪ್ಪ

ಕೃಷ್ಣ, ಮಧುರಂ

ಪಾತ್ರವಹಿಸಿರುವ

ಕನ್ನಗಿ

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪರಸ್ಥಳಕ್ಕೆ

ಅಂಚೆವೆಚ್ಚ ಸೇರಿ ರೂ. 9.

ಸೋಮವಾರ ಸಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–13–0

Edited, Printed and Publishd by M S Krishna Rao at the Satyavadi Press Chamrajpura Agahar Mysore